ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸ್ಪೆಷಲ್ ಕೇಸ್ ನಂಬ್ರ 124/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುದೇಶ್ ಶೆಟ್ಟಿ | ಫ್ರಾಸಾಃ 7 |
| ತಂದೆಯ ಹೆಸರು | : | ಸದಾಶಿವ ಶೆಟ್ಟಿ | ಚಾಸಾಃ 11 |
| ಫ್ರಾಯ | : | 32 ವರ್ಷ | **ದಿನಾಂಕಃ 02.02.2023** |
| ಉದ್ಯೋಗ | : | ಮುಖ್ಯ ನಿರ್ವಹಣಾಧಿಕಾರಿ | ರಂದು ಸಾಕ್ಷಿದಾರರಿಗೆ |
| ವಾಸಸ್ಥಳ | : | ಗರ್ಡಾಡಿ ಗ್ರಾಮ, ಬೆಳ್ತಂಗಡಿ. | ಪ್ರಮಾಣವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 10.06.2016 ರಿಂದ 30.04.2021 ರ ವರೆಗೆ ವಿಜಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಬೆಳ್ತಂಗಡಿ ಶಾಖೆಯಲ್ಲಿ ಶಾಖಾ ಪ್ರಬಂಧಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 22.12.2016 ರಂದು ಎ.ಸಿ.ಬಿ. ಪೊಲೀಸರು ಗೋವಿಂದ ನಾಯ್ಕ, ಲೀಲಾವತಿ ಹೆಚ್.ಬಿ., ಚೈತ್ರಾ, ಚೇತನ್, ಜ್ಞಾನೇಶ್ ಇವರ ಖಾತೆಗಳ ವಿವರಗಳನ್ನು ಪೂರೈಸುವಂತೆ ಪತ್ರ ಕೊಟ್ಟಿದ್ದಾರೆ ನಾನು ಬ್ಯಾಂಕಿನ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ನಮ್ಮ ಬ್ಯಾಂಕಿನಲ್ಲಿ ಲೀಲಾವತಿ ಹೆಚ್.ಬಿ. ಮತ್ತು ಚೈತ್ರಾ ಇವರ ಹೆಸರಿನಲ್ಲಿ ಖಾತೆಗಳು ಇದ್ದದ್ದು ಕಂಡು ಬಂದಿದೆ.

3. ಲೀಲಾವತಿ ಹೆಚ್.ಬಿ. ಇವರ ಹೆಸರಿನಲ್ಲಿ ಒಟ್ಟು 14 ಠೇವಣೆಗಳು, 1 ಶೇರ್ ಮತ್ತು ಒಂದು ಉಳಿತಾಯ ಖಾತೆ ಇದ್ದವು. ಅವುಗಳ ವಿವರಗಳನ್ನು ನಾನು

ಪೊಲೀಸರಿಗೆ ಸಲ್ಲಿಸಿದ್ದೇನೆ. ಸಾಕ್ಷಿ ಆ ವಿವರಗಳನ್ನು ಒಳಗೊಂಡ ತಖ್ತೆ ಗುರುತಿಸಿದ್ದು, ಅದನ್ನು ನಿಶಾನೆ ಪಿ-42 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-42(ಎ) ಎಂದು ಗುರುತಿಸಲಾಯಿತು. ಅವುಗಳಲ್ಲಿ ಇದ್ದಂತಹ ಒಟ್ಟು ಮೊತ್ತ ರೂ.5,03,262/- ಆಗಿತ್ತು. ಠೇವಣಿಗಳನ್ನು ಯಾವ ದಿನಾಂಕಗಳಂದು ಮಾಡಲಾಗಿತ್ತು ಮತ್ತು ಅವುಗಳ ಮ್ಯಾಚ್ಯುರಿಟಿ ಮೊತ್ತಗಳನ್ನೊಳಗೊಂಡ ತಖ್ತೆಯನ್ನು ನಾನು ಪೊಲೀಸರಿಗೆ ಪೂರೈಸಿದ್ದೇನೆ. ಆ ತಖ್ತೆಯನ್ನು ನಿಪಿ-42(ಬಿ) ಮತ್ತು ಸಾಕ್ಷಿಯ ಸಹಿಯನ್ನು ನಿಪಿ-42(ಸಿ) ಎಂದು ಗುರುತಿಸಲಾಯಿತು.

4. ಲೀಲಾವತಿ ಹೆಚ್.ಬಿ. ಇವಳ ಹೆಸರಿನಲ್ಲಿದ್ದ ಉಳಿತಾಯ ಖಾತೆಯ ತಖ್ತೆಯನ್ನು ಪೊಲೀಸರಿಗೆ ಪೂರೈಸಿದ್ದೇನೆ. ಅವಳ ಖಾತೆಯಲ್ಲಿ ದಿನಾಂಕ 20.12.2016 ರಂದು ರೂ.7,527/- ಹಣ ಜಮಾ ಇತ್ತು. ಸಾಕ್ಷಿ ಗುರುತಿಸಿದ ಆ ತಖ್ತೆಯನ್ನು ನಿಶಾನೆ ಪಿ-43 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿ ಲೀಲಾವತಿ ಹೆಚ್.ಬಿ. ಇವಳ ಠೇವಣಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಗುರುತಿಸಿದ್ದು, ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ. (ಇವು ಆಸ್ತಿ ಐಟಂ ನಂ.1.14 ಕ್ಕೆ ಸಂಬಂಧಿಸಿರುತ್ತವೆ.)

| **Sl.No.** | **F.D.No.** | **Exhibit** |
|---|---|---|
| 1. | ...8084 | Ex.P-44 |
| 2. | ...5581 and ...8085 | Ex.P-45 |
| 3. | ...8086 and ...6360 | Ex.P-46 |
| 4. | ...8087 | Ex.P-47 |

| | | |
|---|---|---|
| 5. | ...8088 | Ex.P-48 |
| 6. | ...8089 | Ex.P-49 |
| 7. | ...8090 | Ex.P-50 |
| 8. | ...8091 | Ex.P-51 |
| 9. | ...9316 | Ex.P-52 |
| 10. | ...8095 | Ex.P-53 |
| 11. | ...9318 | Ex.P-54 |
| 12. | ...9317 | Ex.P-55 |
| 13. | ...9319 | Ex.P-56 |
| 14. | ...9342 | Ex.P-57 |
| 15. | ...6096 | Ex.P-58 |
| 16. | ...8096 | Ex.P-59 |

(ಪ್ರತೀಯೊಂದು ಠೇವಣಿಗಳು ಮ್ಯಾಚ್ಯೂರ್ ಆದ ನಂತರ ಅದಕ್ಕೆ ಬಂದ ಬಡ್ಡಿಯನ್ನು ಖಾತೆದಾರನ ನಿಶಾನೆ ಪಿ-43 ರಲ್ಲಿರುವ ಉಳಿತಾಯ ಖಾತೆಗೆ ಜಮಾ ಮಾಡಿ ಮೂಲ ಠೇವಣಿಯನ್ನು ಮತ್ತೆ ನವೀಕರಿಸಲಾಗಿದೆ.)

6. ನಮ್ಮ ಬ್ಯಾಂಕಿನಲ್ಲಿ ಲೀಲಾವತಿ ಹೆಚ್.ಬಿ. ಇವಳು ಖಾತೆ ನಂಬರ್ ....8092 ಮತ್ತು .....8094 ರಲ್ಲಿ ಠೇವಣಿಗಳನ್ನು ಹೊಂದಿದ್ದಳು. ಸಾಕ್ಷಿ ಆ ಠೇವಣಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ60 ಮತ್ತು ನಿಶಾನೆ ಪಿ-61 ಎಂದು ಗುರುತಿಸಲಾಯಿತು.

7. ಚೈತ್ರಾ ಇವಳ ಹೆಸರಿನಲ್ಲಿ ಒಂದು ಶೇರ್ ಮತ್ತು ಒಂದು ಠೇವಣಿ ಇತ್ತು. ಅವುಗಳ ವಿವರಗಳನ್ನು ಎರಡು ತಖ್ತೆಗಳಲ್ಲಿ ನಾನು ಪೂರೈಸಿದ್ದೇನೆ. ಆ ತಖ್ತೆಗಳನ್ನು ಒಟ್ಟುಗೂಡಿಸಿ ನಿಶಾನೆ ಪಿ-62 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-62(ಎ)

ಎಂದು ಗುರುತಿಸಲಾಯಿತು. ಸಾಕ್ಷಿ ಪ್ರತೀಯೊಂದು ತಖ್ತೆಯೊಂದಿಗೆ ಬ್ಯಾಂಕರ್ಸ್ ಅಧಿನಿಯಮದೊಂದಿಗೆ ಪ್ರಮಾಣಪತ್ರ ಗಳನ್ನು ಸಲ್ಲಿಸಿರುತ್ತಾರೆ

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

8. ಠೇವಣಿ ನಂಬರ್ ....6096 ಮತ್ತು ....8096 ಇವುಗಳು ದಿನಾಂಕ 22.12.2016 ರ ಪೂರ್ವದಲ್ಲಿ ಮ್ಯಾಚ್ಯೂರ್ ಆಗಿವೆ ಅಂದರೆ ಸರಿ. ...6096 ಮತ್ತು ....8096 ಈ ಠೇವಣಿಗಳನ್ನು ನವೀಕರಿಸಲಾಗಿದೆ. ದಿನಾಂಕ 22.12.2016 ರಂದು ಲೀಲಾವತಿ ಹೆಚ್.ಬಿ. ಇವಳ ಹೆಸರಿನಲ್ಲಿ ನಮ್ಮ ಬ್ಯಾಂಕಿನಲ್ಲಿದ್ದ ನಿರಖು ಠೇವಣಿಯ ಒಟ್ಟು ಮೊತ್ತ ರೂ.4,95,725/- ಅಂದರೆ ಸರಿ. ನಿಪಿ-43 ರಲ್ಲಿರುವ ಉಳಿತಾಯ ಖಾತೆಯನ್ನು ರೂ.100/- ಜಮಾ ಮಾಡುವುದರೊಂದಿಗೆ ಪ್ರಾಂಭಿಸಲಾಗಿತ್ತು ಅಂದರೆ ಸರಿ. ಅದರಲ್ಲಿ ದಿನಾಂಕ 30.07.2013 ರಂದು ರೂ.500/- ಹಣ ಜಮಾ ಮಾಡಲಾಗಿದೆ. ನಿಪಿ-43 ರಲ್ಲಿ ಆ ನಂತರದ ದಿನಾಂಕಗಳಲ್ಲಿ ಜಮಾ ಆದ ಮೊತ್ತ ನಿರಖು ಠೇವಣಿಯಿಂದ ಬಂದಂತಹ ಬಡ್ಡಿ ಹಣ ಆಗಿದೆ ಅಂದರೆ ಸರಿ. ದಿನಾಂಕ 06.01.2015 ರಂದು ನಿಪಿ-43 ರಲ್ಲಿ ಕಾಣಿಸಿದ 3 ಮೊತ್ತಗಳು ಠೇವಣಿಯಿಂದ ಬಂದ ಬಡ್ಡಿಯಾಗಿರುತ್ತವೆ ಅಂದರೆ ಸರಿ. ಅದೇ ರೀತಿ ದಿನಾಂಕ 03.02.2016 ರಂದು ನಿಪಿ-43 ರಲ್ಲಿ ಕಾಣಿಸಿದ 7 ಮೊತ್ತಗಳು ಠೇವಣಿಯಿಂದ ಬಂದ ಬಡ್ಡಿಯಾಗಿರುತ್ತವೆ ಅಂದರೆ ಸರಿ. ಅದೇ ರೀತಿ ದಿನಾಂಕ 14.11.2016 ರಂದು ನಿಪಿ-43 ರಲ್ಲಿ ಜಮಾ ಮಾಡಿದ 3 ಮೊತ್ತಗಳಲ್ಲಿ ಒಟ್ಟು ರೂ.1,20,000/- ಠೇವಣಿಯ ಮೊತ್ತ ಇದ್ದು ಮತ್ತು ಉಳಿದ ರೂ.12,846/- ಬಡ್ಡಿಯಾಗಿರುತ್ತದೆ ಅಂದರೆ ಸರಿ. ನಿಪಿ-43 ರಲ್ಲಿರುವ ಗ್ರಾಹಕರು ತಮ್ಮ ಖಾತೆಯಲ್ಲಿದ್ದ ಅಸಲು ಮತ್ತು ಬಡ್ಡಿಯ ಹಣವನ್ನು ಹಿಂಪಡೆದ ನಂತರ ಕೊನೆಗೆ ರೂ.7,527/- ಜಮಾ ಉಳಿದಿತ್ತು.

9. ಲೀಲಾವತಿ ಹೆಚ್.ಬಿ. ಮತ್ತು ಚೈತ್ರಾ ಇವರ ಹೆಸರಿನಲ್ಲಿ ನಮ್ಮ ಬ್ಯಾಂಕಿನಲ್ಲಿ ನಿರಖು ಠೇವಣಿಯಾಗಿ ರೂ.6,28,547/- ಇರಲಿಲ್ಲ ಅಂದರೆ ಸರಿ. ಆದರೆ ಅವರಿಬ್ಬರ ಹೆಸರಿನಲ್ಲಿ ನಮ್ಮ ಬ್ಯಾಂಕಿನಲ್ಲಿ ರೂ.5,08,547/- ಠೇವಣಿ ಇತ್ತು.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.